


# ಸಂಧಿವಾತಕ್ಕೆ ನೈಸರ್ಗಿಕ ಪರಿಹಾರ



ಸಂಧಿವಾತದಿಂದ ಚಲನೆಯೇ ಕಷ್ಟವಾಗಿಬಿಡುತ್ತದೆ. ಕೀಲುಗಳಲ್ಲಿ ಹಾಗೂ ಸ್ನಾಯುಗಳಲ್ಲಿ ಸೀಮೆಸುಣ್ಣದಂತ ಉಂಡೆಗಳು ಸಂಗ್ರಹವಾಗಿ ವಿಪರೀತ ನೋವು ಕೊಡುತ್ತವೆ. ಈ ಸಂಗ್ರಹವಾಗುವ ವಸ್ತು ಯೂರಿಕ್ ಆಮ್ಲ.

ಈ ನೋವು ಪಾದದ ಹೆಬ್ಬೆರಳಿನಿಂದ ಆರಂಭವಾಗುತ್ತದೆ. ಮೊಳಕಾಲು, ಹಿಮ್ಮಡ, ಮೊಳಕೈ, ಮಣಿಕಟ್ಟು, ಕೈಬೆರಳುಗಳ ಕೀಲುಗಳಲ್ಲೂ ಆಮ್ಲ ಸಂಗ್ರಹವಾಗಿ ವಿಪರೀತ ನೋವು ಕೊಡುತ್ತದೆ. ದೇಹದಲ್ಲಿ ಯೂರಿಕ್ ಆಮ್ಲದ ಪ್ರಮಾಣ ಅಧಿಕವಾಗಿ ಉಂಡೆಯ ರೂಪದಲ್ಲಿ ಚರ್ಮದ ಅಡಿ ಸಂಗ್ರಹವಾಗುತ್ತದೆ.

ವಯಸ್ಸು, ಆಹಾರ ಪದ್ಧತಿ, ತೂಕ, ಮದ್ಯ ಸೇವನೆ, ದೇಹದಲ್ಲಿ ಸೀಸದ ಮಟ್ಟ ಜಾಸ್ತಿಯಾಗುವುದರಿಂದಲೂ ಸಂಧಿವಾತ ಸಮಸ್ಯೆ ಕಾಣಿಸಿಕೊಳ್ಳುತ್ತದೆ. ದಪ್ಪ ಇರುವವರಲ್ಲಿ ನರಗಳು ತುಂಡಾಗಿ ಇದು ಯೂರಿಕ್ ಆಮ್ಲದ ಉತ್ಪಾದನೆಗೆ ಕಾರಣವಾಗುತ್ತದೆ. ಹೀಗಾಗಿ ದಪ್ಪ ಇರುವವರಲ್ಲಿ ಸಂಧಿವಾತದ ತೊಂದರೆ ಜಾಸ್ತಿ. ಅಧಿಕ ಪ್ರಮಾಣದಲ್ಲಿ ಮದ್ಯ ಸೇವಿಸುವವರಲ್ಲಿ ಯೂರಿಕ್ ಆಮ್ಲ ವಿಸರ್ಜನೆಯಾಗಲು ತಡೆಯುಂಟಾಗುತ್ತದೆ. ಅಧಿಕ ರಕ್ತದೊತ್ತಡ ಹಾಗೂ ಕ್ಯಾನ್ಸರ್‌ನಿಂದ ನರಳುವವರಲ್ಲಿಯೂ ಸಂಧಿವಾತದ ಬಾಧೆ ಜಾಸ್ತಿ.

ಸಂಧಿವಾತದ ನೋವನ್ನು ಕಡಿಮೆ ಮಾಡುವ ಹಲವು ಔಷಧಗಳು ಲಭ್ಯ. ಆದರೆ ನೈಸರ್ಗಿಕ ವಿಧಾನಗಳಿಂದ ಇದನ್ನು ಗುಣಪಡಿಸಬಹುದು.

ಮಾಂಸದಲ್ಲಿ ಯೂರಿಕ್ ಆಮ್ಲ ಉತ್ಪತ್ತಿಯಾಗುವ ಅಂಶಗಳು ಜಾಸ್ತಿಯಿದ್ದು ಇದರ ಸೇವನೆ ತ್ಯಜಿಸಿ ಅಥವಾ ಕಡಿಮೆ ಮಾಡಿ. ಜೊತೆಗೆ ಅಧಿಕ ಪ್ರಮಾಣದಲ್ಲಿ ನೀರು ಸೇವಿಸಿ.

ವ್ಯಾಯಾಮ ಅತ್ಯಗತ್ಯ. ಚಲನೆಯಿಲ್ಲದೇ ಜಾಸ್ತಿ ಹೊತ್ತು ಕೂತು ಕೆಲಸ ಮಾಡುವವರಲ್ಲಿ ಎಲುವು ಪೆಡಸಾಗಿ ಸಂಧಿವಾತ ಕಾಣಿಸಿಕೊಳ್ಳುತ್ತದೆ.

ಆಹಾರದಲ್ಲಿ ಅಲ್ಪ ಬದಲಾವಣೆ ಮಾಡಿಕೊಳ್ಳುವುದು ಒಳಿತು. ಚೆರ್ರಿ ಮೊದಲಾದ ಹಣ್ಣುಗಳ ರಸ ಸೇವಿಸಿ. ಇದು ಯೂರಿಕ್ ಆಮ್ಲವನ್ನು ನಿಯಂತ್ರಿಸುತ್ತದೆ. ಜೊತೆಗೆ ಕೀಲುಗಳಲ್ಲಿ ಹರಳು ರೂಪದ ಆಮ್ಲ ಸಂಗ್ರಹವಾಗುವುದನ್ನು ತಡೆಯುತ್ತದೆ.

ನೋವು ಅಧಿಕವಾದಾಗ ನೋವಿನ ಮಾತ್ರ ಸೇವಿಸುವುದರ ಬದಲು ಆ ಜಾಗದಲ್ಲಿ ಮಂಜುಗಡ್ಡೆಯನ್ನು ಒತ್ತಿ ಹಿಡಿದುಕೊಳ್ಳಿ.

### ಆಹಾರದ ಕೃತಕ ಬಣ್ಣದಿಂದ ಏಕಾಗ್ರತೆ ಕಡಿಮೆ

ಆಹಾರದಲ್ಲಿ ಬಳಕೆಯಾಗುವ ಕೃತಕ ವಸ್ತುಗಳು ಮಕ್ಕಳ ನಡವಳಿಕೆ ಮೇಲೆ ಪರಿಣಾಮ ಬೀರುತ್ತವೆ. ಆಹಾರಕ್ಕೆ ಬಳಸುವ ಬಣ್ಣ, ಹೆಚ್ಚು ದಿನ ಕೆಡದಂತೆ ಕಾದಿಡುವ ಸೋಡಿಯಂ ಬೆಂಜೋಯೇಟ್ (ಇದನ್ನು ತಂಪು ಪಾನೀಯ, ಹಣ್ಣಿನ ರಸ ಬಳಸಲಾಗುವುದು) ಸೇವನೆಯಿಂದ ಮಕ್ಕಳು ಸಾಮಾನ್ಯಕ್ಕಿಂತ ಹೆಚ್ಚು ಚಟುವಟಿಕೆಯಿಂದ ಕೂಡಿದ್ದು ಬಹು ಬೇಗ ಏಕಾಗ್ರತೆ ಕಳೆದುಕೊಳ್ಳುತ್ತಾರೆ ಎಂಬುದು ಅಧ್ಯಯನದಿಂದ ತಿಳಿದುಬಂದಿದೆ.

ಬ್ರಿಟನ್ನಿನ ರಾಷ್ಟ್ರೀಯ ಮಾನಸಿಕ ಆರೋಗ್ಯ ಸಂಸ್ಥೆಯ ಮಕ್ಕಳ ವಿಭಾಗ ಈ ಸಂಶೋಧನೆ ಕೈಗೊಂಡಿದೆ. ಕೃತಕ ಬಣ್ಣ ಹಾಗೂ ಸೋಡಿಯಂ ಬೆಂಜೋಯೇಟ್ ಇರುವ ಹಣ್ಣಿನ ರಸ ಸೇವಿಸಿದ ಮಕ್ಕಳಲ್ಲಿ ಸಾಮಾನ್ಯ ಹಣ್ಣಿನ ರಸ ಸೇವಿಸಿದ ಮಕ್ಕಳಿಗಿಂತ ಏಕಾಗ್ರತೆ ಕಡಿಮೆಯಾಗಿದ್ದು ಕಂಡುಬಂತು. ಜೊತೆಗೆ ಹೆಚ್ಚು ಮಾತನಾಡುವುದು, ಕಿರಿಕಿರಿ ಮಾಡುವುದು ಕಂಡುಬಂತು.

ಈ ಸಂಶೋಧನೆಯಿಂದ ಸಾವಯವ ಹಾಗೂ ನೈಸರ್ಗಿಕ ಆಹಾರ ಸೇವನೆ ಪ್ರತಿಪಾದಿಸುವವರಿಗೆ ಬಲ ಬಂದಂತಾಗಿದೆ.

■ ಸುಧಿ



ಬಿಳಿ ಮಚ್ಚೆಗಳಿಗೆ
ಪರಿಣಿತಿಯನ್ನು 50,000 ರೋಗಿಗಳು ಮೆಚ್ಚಿದ್ದಾರೆ.
ಹೊಸದಾಗಿ ಕಂಡುಹಿಡಿಯಲಾದ ಈ ಔಷಧಿಯನ್ನು ಉಪಯೋಗಿಸುವುದರಿಂದ ನಿಮ್ಮ ತ್ವಚೆಯ ವರ್ಣವು ಅಲ್ಪಕಾಲದಲ್ಲೇ ನೈಜವಾಗಿ ಬದಲಾಗುವುದು. ನಿಮ್ಮ ಕಾಯಿಲೆಯ ವಿವರಗಳನ್ನು ಕಳುಹಿಸಿರಿ ಅಥವಾ ದೂರವಾಣಿ ಮೂಲಕ ಮುಖ್ಯ ವೈದ್ಯರನ್ನು ಸಂಪರ್ಕಿಸಿ.


ಲೈಂಗಿಕ ಸಮಸ್ಯೆ
ಖಂಡಿತ ಗುಣವಾಗುವುದು
ನಪುಂಸಕತೆ, ಗೊನೊರಿಯ, ಸಿಫಿಲಿಸ್, ಬಂಜೆತನ ಹಾಗೂ ಇತರೆ ಗೋಪ್ಯ ಲೈಂಗಿಕ ಸಮಸ್ಯೆಗಳನ್ನು ಆಯುರ್ವೇದಿಕ್ ಚಿಕಿತ್ಸೆ ಮೂಲಕ ಗುಣಪಡಿಸಬಹುದು. ಒಂದು ಕೋರ್ಸ್ ಔಷಧಿ ಹಾಗೂ ಉಚಿತ ಲಿಂಗವರ್ಧಕ್‌ಗೆ ನಮ್ಮನ್ನು ಸಂಪರ್ಕಿಸಲು ಸಂಕೋಚಪಡದಿರಿ.

ಸ್ತ್ರೀ ರೋಗ
ಬಿಳಿಸೆರಗು– ಬಿಳಿ ಅಥವಾ ರಕ್ತ, ಮುಟ್ಟಿನ ತೊಂದರೆ, ಬಂಜೆತನ, ರಕ್ತಹೀನತೆ ಅಶಕ್ತತೆ, ಸೊಂಟದ ನೋವು ಇತ್ಯಾದಿಗೆ ಖಾತರಿಯಾದ ಚಿಕಿತ್ಸೆಗಾಗಿ ಕೂಡಲೆ ನಮ್ಮನ್ನು ಸಂಪರ್ಕಿಸಿ.

ಆಕರ್ಷಕ ಸ್ತನಗಳಿಗೆ

ನಮ್ಮ ಯಶಸ್ವಿ ಆಯುರ್ವೇದಿಕ್ ಚಿಕಿತ್ಸೆ ಪಡೆದು ಅಲ್ಪಕಾಲದಲ್ಲೇ ನಿಮ್ಮ ಸ್ತನಗಳು ಸೂಕ್ತ ವೃದ್ಧಿ ಹೊಂದಲು ನಮ್ಮನ್ನು ಮುಕ್ತವಾಗಿ
Asia Ayurved P.O. Katri Sarai (Gaya)
Phone: 0631-2224881
09931840701 / 09334221088
09431025482 / 09835671211